ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಜಿ. ರಮೇಶ್

ಮತ್ತು

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಮೊಹಮದ್ ನವಾಜ್

ಅಲನ್ ರಯಾನ್ ಲೋಬೋ -ವಿರುದ್ಧ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮತ್ತು ಇತರರು

ರಿಟ್ ಅಜಿಸಂಖ್ಯೆ: 29236/2018 (ಇಡಿಎನ್-ಸಿಇಟಿ), ದಿನಾಂಕ 12 ನೇ ಜುಲೈ, 2018.

ಆಜ್ಞೆ

ನ್ಯಾಯಮೂರ್ತಿ ಹೆಚ್.ಜಿ. ರಮೇಶ್ (ಮೌಖಿಕ):

1. ಈ ರಿಟ್ ಅರ್ಜಿಯಲ್ಲಿ, ಎಮ್.ಬಿ.ಬಿ.ಎಸ್./ಬಿ.ಡಿ.ಎಸ್.ಕೋರ್ಸ್ಗಳಿಗೆ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ ನೋಂದಣಿಯಾಗಿರುವ ಅರ್ಜಿದಾರನು, 2018-19ನೇ ಶೈಕ್ಷಣಿಕ ವರ್ಷಕ್ಕಾಗಿ ಎಮ್.ಬಿ.ಬಿ.ಎಸ್. ಮತ್ತು ಬಿ.ಡಿ.ಎಸ್. ಕೋರ್ಸ್ಗಳಿಗೆ ಪ್ರವೇಶ ಪಡೆಯಲು ಯುಜಿ ಎನ್ಇಇಟಿ (ನೀಟ್) -2018 ರ ಅರ್ಹ ಅಭ್ಯಥಿಗಳ ಕೇಂದ್ರೀಕೃತ ಸಮಾಲೋಚನೆಗಾಗಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಕರ್ನಾಟಕ ಸರ್ಕಾರ ಇವರು ಜಂಟಿಯಾಗಿ ಹೊರಡಿಸಿದ ಕರ್ನಾಟಕ ರಾಜ್ಯ ಮಾಹಿತಿ ಬುಲೆಟಿನ್ನ (ಸಂಕ್ಷಿಪ್ತವಾಗಿ ' ಬುಲೆಟಿನ್ ') 4 ನೇ ಅಧ್ಯಾಯದ 2.1 ನೇ ಖಂಡದ ಸಿಂಧುತ್ವವನ್ನು ಪ್ರಶ್ನಿಸಿದ್ದಾನೆ.2.1 ನೇ ಖಂಡವು, ಭಾರತ ಸಂವಿಧಾನದ 14, 29 ಮತ್ತು 30 ನೇ ಅನುಚ್ಛೇದಗಳನ್ನು ಉಲ್ಲಂಘಿಸುತ್ತದೆ ಎಂಬುದು ಈ ವಾದಕ್ಕೆ ಕಾರಣವಾಗಿದೆ.ಅಭ್ಯರ್ಥಿಯು, ಕರ್ನಾಟಕದಲ್ಲಿ ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ್ದಾನೆಯೇ ಎಂಬುದನ್ನು ನಿರ್ಧರಿಸಲು 2.1 ನೇ ಖಂಡವು ಮಾನದಂಡಗಳನ್ನು ವಿಧಿಸುತ್ತದೆ; ಅದನ್ನು ಈ ಮುಂದಿನಂತೆ ಓದಲಾಗಿದೆ:

" 2.1 ಧಾರ್ಮಿಕ ಅಲ್ಪಸಂಖ್ಯಾತರಿಗೆ ಅರ್ಹತೆ:ಕರ್ನಾಟಕದ ಮತ್ತು ಕರ್ನಾಟಕದವರಲ್ಲದ ಅಭ್ಯರ್ಥಿಗಳ ಧಾರ್ಮಿಕ ಅಲ್ಪಸಂಖ್ಯಾತತೆ (ಕ್ರಿಶ್ಚಿಯನ್)

ಕರ್ನಾಟಕದ ಮತ್ತು ಕರ್ನಾಟಕದವರಲ್ಲದ ಅಭ್ಯರ್ಥಿಗಳ ಧಾರ್ಮಿಕ ಅಲ್ಪಸಂಖ್ಯಾತತೆ (ಮುಸ್ಲಿಂ)

ಎಲ್ಲಾ ರಾಜ್ಯಗಳ ಧಾರ್ಮಿಕ ಅಲ್ಪಸಂಖ್ಯಾತ ಅಭ್ಯರ್ಥಿಗಳನ್ನು ಪರಿಗಣಿಸಲಾಗುತ್ತದೆಯಾದರೂ, 1 ನೇ ತರಗತಿಯಿಂದ ಅರ್ಹತಾ ಪರೀಕ್ಷೆಯವರೆಗೆ 10 ವರ್ಷಗಳ ಕಾಲ ಕರ್ನಾಟಕದಲ್ಲಿ ವ್ಯಾಸಾಂಗ ಮಾಡಿರುವ ಮತ್ತು ಎಸ್ಎಸ್ಎಲ್ಸಿ/10 ನೇ ತರಗತಿ ಅಥವಾ ಕರ್ನಾಟಕ ರಾಜ್ಯದಲ್ಲಿ 2 ನೇ ಪಿ.ಯು.ಸಿ/12 ನೇ ತರಗತಿ ತೇರ್ಗಡೆಯಾದ ಕರ್ನಾಟಕ ವಾಸಿ ಧಾರ್ಮಿಕ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ಆದ್ಯತೆಯನ್ನು ನೀಡಲಾಗುವುದು.

(* ಕರ್ನಾಟಕದ ಅರ್ಹ ಧಾರ್ಮಿಕ ಅಲ್ಪಸಂಖ್ಯಾತ ಅಭ್ಯರ್ಥಿಗಳ ಪಟ್ಟಿಯನ್ನು ಪರಿಶೀಲಿಸಿದ ನಂತರ, ಯಾವುವಾದರೂ ಸೀಟುಗಳು ಉಳಿದಿದ್ದರೆ, ಅವುಗಳನ್ನು ಕರ್ನಾಟಕದವರಲ್ಲದ ಇತರ ಅರ್ಹ ಧಾರ್ಮಿಕ ಅಲ್ಪಸಂಖ್ಯಾತ ಅಭ್ಯರ್ಥಿಗಳಿಗೆ ನೀಡಲಾಗುವುದು) "

ಮೂಲ ಬುಲೆಟಿನ್ನ್ನು ಹಾಜರುಪಡಿಸುವುದರಿಂದ ವಿನಾಯಿತಿ ನೀಡಲಾಗಿದೆ; ಐ.ಎ.ಸಂಖ್ಯೆ: 1/2018 ನ್ನು ತದನುಸಾರವಾಗಿ ವಿಲೆ ಮಾಡಲಾಗಿದೆ.

2. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿ ಮತ್ತು ಪ್ರತ್ಯರ್ಜಿದಾರ -3 ಮತ್ತು 4 ಇವರ ಪರ ಮಾನ್ಯ ಅಡ್ವಕೇಟ್ ಜನರಲ್ ಇವರ ವಾದವನ್ನು ನಾವು ಆಲಿಸಿದ್ದೇವೆ ಮತ್ತು ದಾಖಲೆಯನ್ನು ಪರಿಶೀಲಿಸಿದ್ದೇವೆ.

3. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಅರ್ಜಿದಾರನು ಭಾರತದ ಪ್ರಜೆಯಾಗಿದ್ದು, ಕ್ರಿಶ್ಚಿಯನ್ ಮತಕ್ಕೆ ಸೇರಿದವರಾಗಿದ್ದಾನೆ ಮತ್ತು ಕರ್ನಾಟಕದಲ್ಲಿ ಜನಿಸಿದ್ದಾನೆ.ಆತನ ತಂದೆ-ತಾಯಿಗಳು ಕರ್ನಾಟಕದ ನಿವಾಸಿಗಳಾಗಿದ್ದಾರೆ.ಆದಾಗ್ಯೂ, ಅರ್ಜಿದಾರನು 1 ರಿಂದ 12 ನೇ ತರಗತಿವರೆಗೆ ಕರ್ನಾಟಕದಲ್ಲಿ ವ್ಯಾಸಂಗ ಮಾಡಿರುವುದಿಲ್ಲ, ಆತನು 1 ರಿಂದ 12 ನೇ ತರಗತಿವರೆಗೆ, ಯುನೈಟೆಡ್ ಅರಬ್ ಎಮಿರೇಟ್ಸ್‌ನಲ್ಲಿರುವ ದುಬೈನಲ್ಲಿ ವ್ಯಾಸಂಗ ಮಾಡಿದ್ದಾನೆ ಎಂದು ನಿವೇದಿಸಿದ್ದಾರೆ.ಅಲ್ಲದೆ ಅವರು, ಬುಲೆಟಿನ್ನ 2.1 ನೇ ಖಂಡದಲ್ಲಿ ವಿಧಿಸಿರುವ ಮಾನದಂಡವನ್ನು ಅರ್ಜಿದಾರನು ಈಡೇರಿಸದೇ ಇರುವುದರಿಂದ, ಆತನನ್ನು, ಕರ್ನಾಟಕದ ಕ್ರಿಶ್ಚಿಯನ್ ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವನೆಂದು ಪರಿಗಣಿಸಿರುವುದಿಲ್ಲ ಎಂದು ನಿವೇದಿಸಿದ್ದಾರೆ.ಕರ್ನಾಟಕದ ಕ್ರಿಶ್ಚಿಯನ್ ಧಾರ್ಮಿಕ ಅಲ್ಪಸಂಖ್ಯಾತ ಸ್ಥಾನಮಾನ ಕ್ಲೇಮು ಮಾಡಲು ಕರ್ನಾಟಕದಲ್ಲಿ 10 ನೇ ತರಗತಿ ಅಥವಾ 12 ನೇ ತರಗತಿಯನ್ನು ತೇರ್ಗಡೆಯಾಗಿರಬೇಕೆಂಬುದನ್ನು ಒಳಗೊಂಡು, ಕರ್ನಾಟಕದಲ್ಲಿ ಹತ್ತು ವರ್ಷಗಳ ಕಾಲ ವ್ಯಾಸಂಗ ಮಾಡಿರಬೇಕೆಂಬ ಮಾನದಂಡವು ನಿರಂಕುಶವಾದುದಾಗಿದೆ ಮತ್ತು ಯುಕ್ತವಾದುದಲ್ಲ ಹಾಗೂ ಸಂವಿಧಾನದ 14, 29 ಮತ್ತು 30 ನೇ ಅನುಚ್ಛೇದಗಳ ಉಲ್ಲಂಘನೆಯಾಗಿದೆ ಎಂದು ಅವರು ವಾದಿಸಿದ್ದಾರೆ.ಬುಲೆಟಿನ್ನ 2.1 ನೇ ಖಂಡದಲ್ಲಿ ವಿಧಿಸಿದ ಮಾನದಂಡವನ್ನು ಹೇರಲು ರಾಜ್ಯವು ಅಧಿಕಾರವನ್ನು ಹೊಂದಿರುವ ಕಾನೂನಿನ ಯಾವುದೇ ಉಪಬಂಧವು ಕಂಡುಬರುತ್ತಿಲ್ಲ, ಹಾಗಾಗಿ, ಇದು ಕಾನೂನಿನ ಆಧಾರವಿಲ್ಲದ ಅಧಿಕಾರವಾಗಿದೆ ಎಂದು ಅವರು ವಾದಿಸಿದ್ದಾರೆ.ರಿಟ್ ಅರ್ಜಿಗೆ ಸಮರ್ಥನೆಯಾಗಿ ಅವರು, ಕೃತಿ ಲಖಿನ -ವಿರುದ್ಧ ಕರ್ನಾಟಕ ರಾಜ್ಯ ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಹಾಗೂ ದಾರ್-ಉಸ್-ಸಲಾಮ್ ಶಿಕ್ಷಣ ಟ್ರಸ್ಟ್ -ವಿರುದ್ಧ-ಭಾರತ ವೈದ್ಯಕೀಯ ಪರಿಷತ್, ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ 9 ನೇ ಮೇ, 2017 ರ ಮಧ್ಯಂತರ ಚ ಆದೇಶವನ್ನು ಸಹ ಉಲ್ಲೇಖಿಸಿದ್ದಾರೆ.ಎಮ್. ಮೋನಿಷಾ ವಿರುದ್ಧ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ದಿನಾಂಕ: 17.08.2017 ರ ತೀರ್ಪನ್ನು ಸಹ ಅವರು ಉಲ್ಲೇಖಿಸಿದ್ದಾರೆ.ಏನೇ ಆಗಲಿ, ಅರ್ಜಿದಾರನನ್ನು ಭಾರತದ ಪ್ರಜೆಯೆಂದು ಮತ್ತು ಕ್ರಿಶ್ಚಿಯನ್ ಮತಕ್ಕೆ ಸೇರಿದವನೆಂದು ಅಂಗೀಕರಿಸುವಂತೆಯೇ, ಕರ್ನಾಟಕೇತರ ಕ್ರಿಶ್ಚಿಯನ್ ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವನೆಂದು ಪರಿಗಣಿಸಲು ಆತನು ಹಕ್ಕುಳ್ಳವನಾಗಿದ್ದಾನೆ ಎಂದು ಅವರು ವಾದಿಸಿದ್ದಾರೆ.

4. ಮಾನ್ಯ ಅಡ್ವಕೇಟ್ ಜನರಲ್ ಅವರು, ಒಬ್ಬ ವ್ಯಕ್ತಿಯು, ಒಂದು ರಾಜ್ಯದಲ್ಲಿ ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವನೆಂಬ ಸ್ಥಾನಮಾನವನ್ನು ಕೇಮು ಮಾಡಲು, ಆತನು ಸಾಮಾನ್ಯವಾಗಿ ಆ ರಾಜ್ಯದ ನಿವಾಸಿಯಾಗಿರಬೇಕಾಗುತ್ತದೆ; ಆದ್ದರಿಂದ, ರಾಜ್ಯವು ಅದರ ಅಧಿಕಾರ ವ್ಯಾಪ್ತಿಯೊಳಗೆ, ಒಬ್ಬ ವ್ಯಕ್ತಿಯು, ರಾಜ್ಯದಲ್ಲಿ ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವನೆಂಬ ಸ್ಥಾನಮಾನವನ್ನು ಕೇಮು ಮಾಡಲು ರಾಜ್ಯದ ನಿವಾಸಿಯಾಗಿರುವನೆಂದು ಪರಿಗಣಿಸಬಹುದೇ ಎಂಬುದನ್ನು ನಿರ್ಧರಿಸಲು, ಸೂಕ್ತ ಮಾನದಂಡಗಳನ್ನು ವಿಧಿಸುವ ಅಧಿಕಾರ ಹೊಂದಿರುತ್ತದೆ ಎಂದು ವಾದಿಸಿದ್ದಾರೆ.12 ನೇ ತರಗತಿಯನ್ನು ಅಥವಾ 2 ನೇ ವರ್ಷದ ಪಿಯುಸಿ ಕೋರ್ಸನ್ನು ಪೂರ್ಣಗೊಳಿಸಲು, ಒಬ್ಬ ವಿದ್ಯಾರ್ಥಿಯು ಹದಿನೇಳು ವರ್ಷ ವಯೋಮಾನದವನಾಗಿರಬೇಕಾಗುತ್ತದೆ, ಮತ್ತು ಅದರಿಂದಾಗಿ, ಬುಲೆಟಿನ್ನಲ್ಲಿ 2.1 ನೇ ಖಂಡದಲ್ಲಿ ಹೇಳಿದ

ಹತ್ತು ವರ್ಷಗಳ ಅವಧಿಯ ಕಾಲ ವಿದ್ಯಾರ್ಥಿಯು ಕರ್ನಾಟಕದಲ್ಲಿ ವ್ಯಾಸಂಗ ಮಾಡಿರಬೇಕೆಂಬ ಮಾನದಂಡವು ಅಡ್ಡಿ ಬರುತ್ತದೆಂಬ ಮಾನದಂಡವನ್ನು, ನಿರಂಕುಶ ಅಥವಾ ಸಕಾರಣವಲ್ಲವೆಂದು ಹೇಳಲು ಈ ನ್ಯಾಯಾಲಯವು ಮಧ್ಯ ಪ್ರವೇಶಿಸುವುದು ಅಗತ್ಯವಿಲ್ಲವೆಂದು ವಾದಿಸಿದ್ದಾರೆ.

5. ಕರ್ನಾಟಕ ರಾಜ್ಯದಲ್ಲಿ ಪದವಿಪೂರ್ವ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವ ಉದ್ದೇಶಕ್ಕಾಗಿ, ಕರ್ನಾಟಕ ರಾಜ್ಯದಲ್ಲಿ ಧಾರ್ಮಿಕ ಅಲ್ಪಸಂಖ್ಯಾತ ಸ್ಥಾನಮಾನವನ್ನು ಕ್ಲೇಮು ಮಾಡಲು, ಕರ್ನಾಟಕದಲ್ಲಿ ಹತ್ತು ವರ್ಷಗಳ ಕಾಲ ವ್ಯಾಸಂಗ ಮಾಡಿರಬೇಕೆಂಬ ಮಾನದಂಡವು, ನಿರಂಕುಶವಾಗಿದೆಯೇ ಮತ್ತು ಅದು ಭಾರತ ಸಂವಿಧಾನದ 14, 29 30ನೇ ಅನುಚ್ಛೇದಗಳ ಉಲ್ಲಂಘನೆಯಾಗಿದೆಯೇ ಎಂಬುದು ಈ ಅರ್ಜಿಯಲ್ಲಿ ಅ ಪರಿಗಣಿಸಬೇಕೆಂದು ಅಗತ್ಯಪಡಿಸಿರುವ ಪ್ರಶ್ನೆಯಾಗಿದೆ.

6. ಒಬ್ಬ ವ್ಯಕ್ತಿಯು ರಾಜ್ಯದಲ್ಲಿ ಜನಿಸಿದ್ದಾನೆ ಮತ್ತು ಆತನ ತಂದೆ-ತಾಯಿಗಳು ಆ ರಾಜ್ಯದ ನಿವಾಸಿಗಳಾಗಿದ್ದಾರೆ ಎಂಬ ಕಾರಣ ಮಾತ್ರದಿಂದಲೇ, ಆತನು ಆ ರಾಜ್ಯದ ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ್ದಾನೆಂಬ ಸ್ಥಾನಮಾನವು ಅವನಿಗೆ ಪ್ರದತ್ತವಾಗುವುದಿಲ್ಲ.ಕಾನೂನಿನಲ್ಲಿ, ಒಬ್ಬ ವ್ಯಕ್ತಿಯು ರಾಜ್ಯದಲ್ಲಿ ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರುವ ಸ್ಥಾನಮಾನವನ್ನು ಕ್ಲೇಮು ಮಾಡಲು, ಆತನು ಸಾಮಾನ್ಯವಾಗಿ ಆ ರಾಜ್ಯದ ನಿವಾಸಿಯಾಗಿರಬೇಕು.ನಿವಾಸಿ ಎಂಬುದು ತಾತ್ಕಾಲಿಕ ನಿವಾಸಿ ಎಂದು ಅರ್ಥ ಕೊಡುವುದಿಲ್ಲ.ಆದ್ದರಿಂದ, ರಾಜ್ಯದಲ್ಲಿ ಪದವಿಪೂರ್ವ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ನೀಡುವ ಉದ್ದೇಶಕ್ಕಾಗಿ, ರಾಜ್ಯದಲ್ಲಿ ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರುವ ಸ್ಥಾನಮಾನವನ್ನು ಪಡೆಯಲು, ಒಬ್ಬ ವ್ಯಕ್ತಿಯನ್ನು ರಾಜ್ಯದ ನಿವಾಸಿಯಾಗಿರುವನೆಂದು ಪರಿಗಣಿಸಬಹುದೇ ಎಂಬುದನ್ನು ನಿರ್ಧರಿಸಲು, ರಾಜ್ಯವು ಸೂಕ್ತ ಮಾನದಂಡಗಳನ್ನು ವಿಧಿಸಬೇಕಾದ ಅಗತ್ಯವಿರುತ್ತದೆ.ರಾಜ್ಯವು, ಅದರ ಅಧಿಕಾರ ವ್ಯಾಪ್ತಿಯೊಳಗೆ, ಈ ಬಗ್ಗೆ ಸೂಕ್ತ ಮಾನದಂಡಗಳನ್ನು ವಿಧಿಸುವುದು.ನಮ್ಮ ಅಭಿಪ್ರಾಯದಲ್ಲಿ, ರಾಜ್ಯದಲ್ಲಿ ಪದವಿಪೂರ್ವ ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ನೀಡುವ ಉದ್ದೇಶಕ್ಕಾಗಿ, ಅಭ್ಯರ್ಥಿಯು, ಕರ್ನಾಟಕದಲ್ಲಿ ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿರುವನೆಂದು ಪರಿಗಣಿಸಲು, ಬುಲೆಟಿನ್ನ 2.1 ನೇ ಖಂಡದಲ್ಲಿ ರಾಜ್ಯವು ವಿಧಿಸಿದ, ಕರ್ನಾಟಕದಲ್ಲಿ ಹತ್ತು ವರ್ಷಗಳ ಕಾಲ ವ್ಯಾಸಂಗ ಮಾಡಿರಬೇಕೆಂಬ ಮಾನದಂಡವನ್ನು, ನಿರಂಕುಶವೆಂದು ಅಥವಾ ಸಕಾರಣವಲ್ಲವೆಂದು ಮತ್ತು ಸಂವಿಧಾನದ 14, 29 ಮತ್ತು 30 ನೇ ಅನುಚ್ಛೇದಗಳನ್ನು ಉಲ್ಲಂಘಿಸಿದೆ ಎಂದು ಹೇಳಲಾಗುವುದಿಲ್ಲ.ವಿರೋಧಿಸಲು ಮಂಡಿಸಿದ ವಾದಕ್ಕೆ ಗುಣಾರ್ಹತೆ ಇಲ್ಲದಿರುವುದರಿಂದ, ಅದನ್ನು ತಿರಸ್ಕರಿಸಲಾಗಿದೆ.

7. ಅರ್ಜಿದಾರರ ಪರ ನ್ಯಾಯವಾದಿಗಳು ಉಲ್ಲೇಖಿಸಿರುವ ಎರಡು ತೀರ್ಪುಗಳು, ರಾಜ್ಯದಲ್ಲಿ ಧಾರ್ಮಿಕ ಅಲ್ಪಸಂಖ್ಯಾತ ವರ್ಗವನ್ನು ಕುರಿತು ನಿರ್ಧರಿಸುವ ಯಾವುದೇ ಮಾನದಂಡವನ್ನು ವಿಧಿಸಿರುವುದಿಲ್ಲ.ಆದ್ದರಿಂದ, ಈ ಅರ್ಜಿಯಲ್ಲಿ ಎತ್ತಿದ ಪ್ರಶ್ನೆಯೊಂದಿಗೆ ಅವು ಯಾವುದೇ ಸಂಬಂಧ ಹೊಂದಿರುವುದಿಲ್ಲ.ಮೇಲೆ ಉಲ್ಲೇಖಿಸಿದ, ಮೋನಿಷಾಳ ಮೊಕದ್ದಮೆ, ಅರ್ಜಿಯಲ್ಲಿ ಸಿಂಧುತ್ವವನ್ನು ಪ್ರಶ್ನಿಸಿರುವ ಬುಲೆಟಿನ್ನ 2.1 ನೇ ಖಂಡವು ಪರಿಗಣನೆ ಒಳಗೆ ಬರುವುದೇ ಇಲ್ಲ ಮತ್ತು ಇದಲ್ಲದೆ, ರಾಜ್ಯದಲ್ಲಿ ಧಾರ್ಮಿಕ ಅಲ್ಪಸಂಖ್ಯಾತ ವರ್ಗದ ನಿರ್ಧರಣೆಗಾಗಿ ವಿಧಿಸಿದ ಮಾನದಂಡವ ಅದರಲ್ಲಿ ಇಲ್ಲವೆ ಇಲ್ಲ. ಆದುದರಿಂದ, ಸದರಿ ತೀರ್ಪು, ಅರ್ಜಿದಾರರಿಗೆ ಯಾವುದೇ ರೀತಿಯಲ್ಲೂ ಸಹಾಯಕವಾಗುವುದಿಲ್ಲ.

8. ಅರ್ಜಿದಾರನು ಭಾರತದ ಪ್ರಜೆಯಾಗಿರುವುದರಿಂದ ಮತ್ತು ಕ್ರಿಶ್ಚಿಯನ್ ಮತಕ್ಕೆ ಸೇರಿದವನಾಗಿರುವುದರಿಂದ, ಬುಲೆಟಿನ್ನ 2.1 ನೇ ಖಂಡದಲ್ಲಿ ವಿಧಿಸಿದ ಮಾನದಂಡವನ್ನು ಆತನು ಈಡೇರಿಸದೇ ಇರುವುದರಿಂದ, ಕರ್ನಾಟಕದ ಕ್ರಿಶ್ಚಿಯನ್ ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವನೆಂದು ಆತನನ್ನು ಪರಿಗಣಿಸಲಾಗುವುದಿಲ್ಲವಾದರೂ, ಕರ್ನಾಟಕದವರಲ್ಲದ ಕ್ರಿಶ್ಚಿಯನ್ ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವನೆಂದು ಪರಿಗಣಿಸಲ್ಪಡಲು ಹಕ್ಕುಳ್ಳವನಾಗಿದ್ದಾನೆ.ಈ ಆಜ್ಞೆಯು, ಕರ್ನಾಟಕದ ಕ್ರಿಶ್ಚಿಯನ್ ಧಾರ್ಮಿಕ ಅಲ್ಪಸಂಖ್ಯಾತ ವರ್ಗದ ಅಡಿಯಲ್ಲಿ ಹೊರತುಪಡಿಸಿ, ಅರ್ಜಿದಾರನು ಹಕ್ಕುಳ್ಳ ಸೀಟಿಗಾಗಿ, ಯಾವುದೇ ಇತರ ಪ್ರವರ್ಗದ ಅಡಿಯಲ್ಲಿ ಎಮ್ಬಿಬಿಎಸ್/ಬಿಡಿಎಸ್ ಕೋರ್ಸ್ಗಳಿಗೆ ಪ್ರವೇಶವನ್ನು ಕ್ಲೇಮು ಮಾಡಲು ಆತನಿಗೆ ಬಾಧಕವಾಗತಕ್ಕದ್ದಲ್ಲ.ರಿಟ್ ಅರ್ಜಿಯನ್ನು ತದನುಸಾರವಾಗಿ ವಿಲೆ ಮಾಡಲಾಗಿದೆ.

ಅರ್ಜಿಯನ್ನು ವಿಲೆ ಮಾಡಲಾಗಿದೆ.